

## ತೆರೆಮರೆಗೆ ಸರಿದ ಸ್ಟೌವ್‌ಗಳು

ಮಧ್ಯಮ ಮತ್ತು ಕೆಳಮಧ್ಯಮ ವರ್ಗಗಳ ಮನೆಗಳಲ್ಲಿ ಅಡುಗೆ ಮಾಡಲು, ನೀರು ಕಾಯಿಸಲು ಬಳಸಲಾಗುತ್ತಿದ್ದ ಸೀಮೆಎಣ್ಣೆಯ ಸ್ಟೌವ್‌ಗಳು ಇಂದು ತೆರೆಮರೆಗೆ ಸರಿದಿವೆ. ಅಂತಹ ಸ್ಟೌವ್ ಒಂದರ ಚಿತ್ರವಿದು. ಸ್ಟೌವ್‌ನ ಒಳಕ್ಕೆ ಸೀಮೆಎಣ್ಣೆ ತುಂಬಿಸಿ ಟ್ಯಾಂಕ್‌ನ ಎದುರುಗಡೆಯ ತಿದಿಯಿಂದ ಗಾಳಿ ಹೊಡೆದಾಗ (ಪಂಪ್ ಮಾಡಿದಾಗ) ಸ್ಟೌವ್‌ನ ಮಧ್ಯಭಾಗದ ಪೈಪ್‌ನಲ್ಲಿರುವ ಸಣ್ಣ ರಂಧ್ರದಲ್ಲಿ ಸೀಮೆಎಣ್ಣೆ ಚಿಲುಮೆ ರೂಪದಲ್ಲಿ ಚಿಮ್ಮುತ್ತದೆ. ಬೆಂಕಿಕಡ್ಡಿ ಗೀರಿ ಅದಕ್ಕಿಡಿದರೆ ಹೊತ್ತಿಕೊಳ್ಳುತ್ತದೆ.

ಬೆಂಕಿಯ ಜ್ವಾಲೆ ತಗ್ಗಿಸಲು ಟ್ಯಾಂಕ್‌ನ ತಿರುಪನ್ನು ತಿರುಗಿಸಿ ಗಾಳಿ ಹೊರಬಿಡಬೇಕು. ಜ್ವಾಲೆ ಇನ್ನಷ್ಟು ಹೆಚ್ಚಾಗಲು ಪಂಪ್ ಮಾಡಬೇಕು. ಸೋಸಿದ ಸೀಮೆಎಣ್ಣೆ ಹಾಕುವುದರಿಂದ ಟ್ಯಾಂಕ್‌ನ ಒಳ ಸೇರುವ ತ್ಯಾಜ್ಯ, ಟ್ಯಾಂಕ್‌ನಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಹಾಗೂ ಜ್ವಾಲೆಯು ಉರಿಯುವುದರಿಂದ ಉಂಟಾಗುವ ಮಸಿಯು ಸ್ಟೌವ್‌ನ ಬರ್ನರ್‌ನ ಸಣ್ಣ ರಂಧ್ರದಲ್ಲಿ ಸಿಲುಕಿ ಸರಿಯಾಗಿ ಕಾರ್ಯನಿರ್ವಹಿಸದು. ರಂಧ್ರದಲ್ಲಿ ಸಿಲುಕಿದ ತ್ಯಾಜ್ಯವನ್ನು ಸಡಿಲಗೊಳಿಸಲೆಂದು ಇದ್ದ ಪಿನ್‌ನಿಂದ ಚುಚ್ಚಿದರೆ ಜ್ವಾಲೆ ಇನ್ನಷ್ಟು ಪ್ರಖರಗೊಳ್ಳುತ್ತಿತ್ತು. ಎಲ್ಲರ ಮನೆಗಳಲ್ಲಿ ಇರುತ್ತಿದ್ದ ಈ ಸ್ಟೌವ್‌ಗಳು ಗುಜರಿ ಸೇರಿರುತ್ತಿರುವುದು ವಿಷಾದನೀಯ.

–ಶರದ್ ಕುಲಕರ್ಣಿ, ಬೀದರ್





## ಶತಮಾನದ ಹಿಂದಿನ ಲಗ್ನ ಪತ್ರಿಕೆ



ಚಿತ್ರದಲ್ಲಿ ಕಾಣುತ್ತಿರುವುದು ಮದುವೆಯ ಆಹ್ವಾನ ಪತ್ರಿಕೆ. ‘ಇದರಲ್ಲೇನು ವಿಶೇಷವಿದೆ ಬಿಡಿ’ ಅನ್ನಬೇಡಿ. ವಿಶೇಷ ಇದೆ. ಈ ವಿವಾಹ ಆಹ್ವಾನ ಪತ್ರಿಕೆಯು ಅರವತ್ತು ಎಂಬತ್ತು ವರ್ಷದ ಹಿಂದಿನದ್ದಲ್ಲ. ಬರೋಬ್ಬರಿ ನೂರು ವರ್ಷಗಳಷ್ಟು ಹಳೆಯದು. ಅದಕ್ಕಿಂತ ಮಿಗಿಲಾಗಿ ಎಂಟು ಜೋಡಿಗಳ ಒಂದೇ ವಿವಾಹ ಕರೆಯೋಲೆಯಿದು.

ಕೈಬರಹದ ಈ ಕರೆಯೋಲೆಯನ್ನು ಕನ್ನಡದಲ್ಲಿ ಬರೆಯಲಾಗಿದೆ. ಇದು ನಮ್ಮ ಅಜ್ಜ ಕುಬುಸದ ಚನ್ನಬಸಪ್ಪ(ತಂದೆಯ ತಂದೆ) ಹಾಗೂ ಅಜ್ಜಿ ನಿಂಬಮ್ಮ (ತಂದೆಯ ತಾಯಿ) ಅವರ ಲಗ್ನಪತ್ರಿಕೆ. ಧುರ್ಮತಿ ನಾಮ, ಮಾರ್ಗಶಿರ ಶುಭ ಸೋಮವಾರದಂದು (26/11/1921) ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದಲ್ಲಿ ನಡೆಯಲಾದ ಈ ವಿವಾಹ ಮಹೋತ್ಸವದಲ್ಲಿ ಪಾಣಿಗ್ರಹಣ ಮಾಡಿಕೊಂಡ ಜೋಡಿಗಳು ಬರೋಬ್ಬರಿ ಎಂಟು. ಲಿಂಗೈಕ್ಯರಾಗಿದ್ದ ಅಜ್ಜ–ಅಜ್ಜಿಯಂದಿರನ್ನು ಸ್ಮರಿಸಿಕೊಳ್ಳುತ್ತಾ ಅವರ ವಿವಾಹ ಶತಮಾನೋತ್ಸವದ ಸಂಭ್ರಮವನ್ನು ಈಚೆಗೆ ಶಿವಮೊಗ್ಗದಲ್ಲಿ ಆಚರಿಸಲಾಯಿತು. ಸಂಭ್ರಮಾಚರಣೆಯಲ್ಲಿ ಅಜ್ಜಿಯ ತವರು (ಕರ್ನಲ್ಲಿ) ಮನೆತನದವರು, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಎಲ್ಲರೂ ಭಾಗಿಯಾಗಿದ್ದರು.

–ವಿದ್ಯಾ ವಿ. ಹಾಲಭಾವಿ, ಬೆಂಗಳೂರು